Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 14
ದಿನಾಂಕ: 07.10.2025



Rtn. Anil Kumar
President



Rtn. Krishnappa
Secretary

## ನವೆಂಬರ್ 2: "ಕಲಾ ಮಂಜೂಷ"

### ರೋಟರಿ ವಲಯ 4ರ ಸಾಂಸ್ಕೃತಿಕ ಸಂಗಮ

ರೋಟರಿ ವಲಯ 4ರ ಸಾಂಸ್ಕೃತಿಕ ಸಂಗಮ "ಕಲಾ ಮಂಜೂಷ" ನವೆಂಬರ್ 2 ರಂದು ನಡೆಯಲಿದೆ. ರೋಟರಿ ಉಡುಪಿ ಆತಿಥ್ಯ ವಹಿಸಿರುವ ಈ ಕಾರ್ಯಕ್ರಮವನ್ನು ಶ್ರೀ ಕೃಷ್ಣ ಮಠದ ಪಾರ್ಕಿಂಗ್ ಸ್ಥಳದ ಸಮೀಪದ ಮಥುರಾ ಕಂಫರ್ಟ್ಸ್ ಮೊದಲ ಮಹಡಿಯಲ್ಲಿ ಆಯೋಜಿಸಲಾಗಿದೆ.

ಪೂರ್ವಾಹ್ನ 8:30ರಿಂದ ಸಾಯಂಕಾಲ 5:00 ಘಂಟೆಯವರೆಗೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಅಕ್ಟೋಬರ್ 27ರ ಮೊದಲು ಸ್ಪರ್ಧಿಗಳ ನೋಂದಾವಣೆ ಮಾಡಬೇಕಿದೆ.

ಪ್ರಥಮ ಸ್ಥಾನ ವಿಜೇತರು ನವೆಂಬರ 23ರಂದು ಶೃಂಗೇರಿಯಲ್ಲಿ ನಡೆಯುವ ರೋಟರಿ ಜಿಲ್ಲಾ ಮಟ್ಟದ ಭಾಗವಹಿಸುವ ಅರ್ಹತೆ ಪಡೆಯುತ್ತಾರೆ. ಆದರೆ ಅವರು ನವೆಂಬರ್ ಮೂರರಂದೇ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕಿದೆ ಎಂದು ಸುತ್ತೋಲೆಯಲ್ಲಿ ತಿಳಿಯಲಾಗಿದೆ.

### Monthly Theme of October
### Economic and Community Development

ರೋಟರಿ ಸಂಸ್ಥೆಯು ಈ ತಿಂಗಳು ವಿಶೇಷವಾಗಿ "ಸಾಮುದಾಯಿಕ ನೆಲೆಯಲ್ಲಿ ಆರ್ಥಿಕ ಅಭಿವೃದ್ಧಿಯ" ವಿಷಯಕ್ಕೆ ಒತ್ತು ಕೊಡುತ್ತಿದ್ದು, ಕ್ಲಬ್ ಗಳು ತಮ್ಮ ಪರಿಸರದಲ್ಲಿ ಇದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿವೆ.

ಗ್ರಾಮೀಣ ಭಾರತದಲ್ಲಿ ಆರ್ಥಿಕ ಅಭಿವೃದ್ಧಿಯು, ಹೆಚ್ಚುತ್ತಿರುವ ಆದಾಯ, ಕೃಷಿಯೇತರ ವಲಯವು ಗಮನಾರ್ಹವಾಗಿ ಗ್ರಾಮೀಣ ಉತ್ಪಾದನೆಗೆ ನೀಡುತ್ತಿರುವ ಕೊಡುಗೆ, ರಸ್ತೆಗಳು, ನೀರು ಸರಬರಾಜು ಮುಂತಾದ ಸುಧಾರಿತ ಮೂಲಸೌಕರ್ಯಗಳಿಂದ ಗುರುತಿಸಲ್ಪಟ್ಟಿದೆ.

ಸರ್ಕಾರಿ ಉಪಕ್ರಮಗಳು MGNREGA ನಂತಹ ಕಾರ್ಯಕ್ರಮಗಳ ಮೂಲಕ ಉದ್ಯೋಗವನ್ನು ಹೆಚ್ಚಿಸುವುದು,

ಮುಂದಿನ ಪುಟಕ್ಕೆ….

ರೋಟರಿ ವಲಯ 4ರ ಸಾಂಸ್ಕೃತಿಕ ಸಂಗಮ "ಕಲಾ ಮಂಜೂಷ"ಕ್ಕೆ

## ರೋಟರಿ ಐಸಿರಿಯಿಂದ ಭರದ ತಯಾರಿ



ಈ ಸಾಲಿನ ಕಲ್ಚರಲ್ ಸ್ಪರ್ಧೆಗಳಲ್ಲಿ ಭಾಗವಹಿಸುವ ರೋಟರಿ ಐಸಿರಿಯ ಸದಸ್ಯರು ಹಾಗೂ ಅವರ ಕುಟುಂಬದ ಸದಸ್ಯರ ಪಟ್ಟಿಯನ್ನು ಮಾಡಲಾಗಿದೆ. ಹೆಚ್ಚಿನ ಸದಸ್ಯರಿಗೆ ಕಲ್ಚರಲ್ ಕೋರ್ಡಿನೇಟರ್ ರೊ. ಡಾ. ಸ್ವಾತಿ ಪೈ ಅವರು ವಿಷಯ ತಿಳಿಸಿದ್ದಾರೆ. ಇನ್ನುಳಿದವರಿಗೆ ಸದ್ಯದಲ್ಲೇ ಕರೆ ಮಾಡಲಿದ್ದಾರೆ. ಎಲ್ಲ ಸದಸ್ಯರು ಸಹಕರಿಸಿ ಸಂಪೂರ್ಣವಾಗಿ ತೊಡಗಿಕೊಂಡು ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಬೇಕಾಗಿ ವಿನಂತಿ.

ಯುವಸೇವಾ ನಿರ್ದೇಶಕ ರೊ. ಸುಕೇಶ್ ಕುಂದರ್ ಮುಂದಾಳತ್ವದಲ್ಲಿ ಕಿರು ನಾಟಕ್ಕೆ ತಯಾರಿಯೂ ನಡೆದಿದ್ದು, ಪ್ರತೀದಿನ ಸಾಯಂಕಾಲ 7:00 ಘಂಟೆಗೆ ಆರ್.ಸಿ.ಸಿ. ಕಾರ್ಯಾಲಯದಲ್ಲಿ ಸ್ಕಿಟ್ ಪ್ರಾಕ್ಟೀಸ್ ಆಗುತ್ತಿದೆ.

ರೊ. ಡಾ. ಸ್ವಾತಿ ಪೈಯವರೂ ಸಹ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ತಮ್ಮ ಕ್ಲಿನಿಕ್ ನಲ್ಲಿಯೇ ಪ್ರತೀದಿನ ಸಾಯಂಕಾಲ 7:30ರಿಂದ ಮಾರ್ಗದರ್ಶನ ನೀಡುತ್ತಿದ್ದಾರೆ.



## ಪ್ರೇರಣಾ ಸಿರಿ

**ಸಂಸಾರ ನಿಭಾಯಿಸಲಾರದವನು ಸಮಾಜ ನಿಭಾಯಿಸಲಾರ !**

– ರೊ. ಸುಕೇಶ್ ಕುಂದರ್

ತಂದೆ, ತಾಯಿಯನ್ನು ಸಾಕದ ಮಗ ಅಥವಾ ಮಗಳು ಮತ್ತು ಅತ್ತೆ, ಮಾವನನ್ನು ಸಾಕದ ಅಳಿಯ ಅಥವಾ ಸೊಸೆ, ಇವರು ಸಮಾಜದಲ್ಲಿ ಎಷ್ಟೇ ದೊಡ್ಡ ಗಣ್ಯ ವ್ಯಕ್ತಿಗಳಾಗಿರಲಿ, ಭಾಷಣಕಾರರಾಗಿರಲಿ, ಪ್ರತಿಷ್ಠಿತ ಹುದ್ದೆಗಳನ್ನು ಹೊಂದಿರಲಿ, ದಾನಿಗಳಾಗಿರಲಿ, ಸಮಾಜ ಸುಧಾರಕರಾಗಿರಲಿ, ಸಂಘ ಸಂಸ್ಥೆಗಳಲ್ಲಿ ಎಷ್ಟೇ ದೊಡ್ಡ ಸ್ಥಾನಮಾನದಲ್ಲಿ ಇದ್ದರೂ, ಇವರನ್ನು ದೇವರು ಖಂಡಿತ ಮೆಚ್ಚುವುದಿಲ್ಲ. ಇವರಿಗೆ ದೇವರ ಆಶೀರ್ವಾದ ಖಂಡಿತ ಸಿಗುವುದಿಲ್ಲ ಮತ್ತು ಸಮಾಜ ನಿಭಾಯಿಸಲೂ ಸಾಧ್ಯವಿಲ್ಲ.

ಗಂಡ ಹೆಂಡತಿ ಅನ್ಯನ್ಯವಾಗಿ, ಪರಸ್ಪರ ಹೊಂದಾಣಿಕೆಯಿಂದ, ಸಣ್ಣಪುಟ್ಟ ತಪ್ಪುಗಳನ್ನು ಮರೆತು ಕಷ್ಟ ಸುಖದಲ್ಲಿ ಇಬ್ಬರೂ ಪರಸ್ಪರ ಸುಖ ಸಂಸಾರ ನಡೆಸಿದರೆ ಮಾತ್ರ ಜೀವನದಲ್ಲಿ ಒಳ್ಳೆಯ ಸತಿಪತಿಗಳಾಗಿರಲು ಸಾಧ್ಯ. ಸಮಾಜದಲ್ಲಿ ಒಳ್ಳೆಯ ಗೌರವ ಸಿಗುತ್ತದೆ. ಸಮಾಜವನ್ನು ಒಳ್ಳೆಯ ರೀತಿಯಲ್ಲಿ ನಿಭಾಯಿಸಬಹುದು.

ಅಣ್ಣ, ತಮ್ಮ, ಅಕ್ಕ, ತಂಗಿಯರು ಆಸ್ತಿ ಪಾಸ್ತಿಗಾಗಿ ಜನ್ಮ ಕೊಟ್ಟ ತಂದೆ ತಾಯಿಯರ ಎದುರೇ ಗಲಾಟೆ ಮಾಡಿ. ಸಹೋದರತೆಯ ಬಾಂಧವ್ಯ ಮರೆತು, ಕಚ್ಚಾಡಿಕೊಂಡು, ಬಡಿದಾಡಿಕೊಂಡು, ಸಂಸಾರದ ಮಾನ, ಗೌರವವನ್ನು ಬೀದಿಗೆ ತಂದವರು, ಸಮಾಜದಲ್ಲಿ ಎಷ್ಟೇ ದೊಡ್ಡ ವ್ಯಕ್ತಿತ್ವವನ್ನು ಹೊಂದಿದ್ದರೂ, ಅವರನ್ನು ಸಮಾಜ ಗೌರವಿಸುವುದಿಲ್ಲ. ಅಂತಹ ವ್ಯಕ್ತಿಯೂ ಸಮಾಜವನ್ನು ನಿಭಾಯಿಸಲಾರ.

ನಾವು, ನಮ್ಮ ಮನೆಯಲ್ಲಿ ತಂದೆ, ತಾಯಿ, ಅಣ್ಣತಮ್ಮಂದಿರು, ಅಕ್ಕತಂಗಿಯಂದಿರ ಜೊತೆ ಪ್ರೀತಿಯಿಂದ, ಹೊಂದಾಣಿಕೆಯಿಂದ ಸಂಸಾರ ನಿಭಾಯಿಸಲು ತಿಳಿದಿದ್ದರೆ, ಸಮಾಜವನ್ನು ನಿಭಾಯಿಸಲು ಕಷ್ಟ ಆಗುವುದಿಲ್ಲ.

## ಜ್ಞಾನಸಿರಿ ಕಾರ್ಯಕ್ರಮದ ಆಯ – ವ್ಯಯ

Rotary

UNITE FOR GOOD

**ROTARY DISTRICT 3182**
**DISTRICT INTERACT ASSEMBLY - *"JNANASIRI"***

**Host: ROTARY AISIRI PARKALA**
**(Zone – 4, RID 3182)**
**Day & Date: Sunday, 07 September 2025**
**Venue: Muddanna Mantapa, MGM College, Udupi**

**Income & Expenditure Statement**
**(No. of participants: @1000+)**

| Income Rs. | | Expenditure Rs. | |
|---|---|---|---|
| Donation from RID Dist. 3182 | 25,000.00 | Towards catering (breakfast and Lunch) | 1,20,000.00 |
| Donation from Rotarians & Office bearers of Zone & Dist. | 89,500.00 | Towards kits & stationary, postage and mementoes & shawls | 35,395.00 |
| Donation from Host Club members | 75,371.00 | Towards banners & LED screen | 20,000.00 |
| Donation from Sponsorers | 40,234.00 | Towards photography and printing | 12,900.00 |
| Total Income | 2,30,105.00 | Towards stage, chairs and sound system | 40,684.00 |
| | - | Towards hall rent (paid to MGM college) | 7000.00 |
| Excess of expenditure over income (adjusted from club) | 13,874.00 | Honorarium to one resource person & Inauguration | 8,000.00 |
| | - | Total expenses | 2,43,979.00 |
| **Grand Total** | **2,43,979.00** | **Grand total** | **2,43,979.00** |

**Place:** Parkala
**Date:** 23-09-2025

| Sd/- Treasurer (Ganesha A) | Sd/- Event Chairman (Sandeep Kumar Manja) | Sd/- President (Anil Kumar) |
|---|---|---|

ಮಹಿಳಾ ಸಬಲೀಕರಣ ಮತ್ತು ಜೀವನೋಪಾಯಕ್ಕಾಗಿ ಸ್ವ-ಸಹಾಯ ಗುಂಪುಗಳನ್ನು (SHGs) ಉತ್ತೇಜಿಸುವುದು ಮತ್ತು ಗ್ರಾಮೀಣ ಆರ್ಥಿಕ ಚಟುವಟಿಕೆಗಳನ್ನು ಬೆಂಬಲಿಸಲು ಹಣಕಾಸು ಸಂಸ್ಥೆಗಳನ್ನು ಸಂಯೋಜಿಸುವುದರ ಮೇಲೆ ಕೇಂದ್ರೀಕರಿಸುತ್ತವೆ. ಹೊಸ ಗ್ರಾಮೀಣ ಸಮೃದ್ಧಿ ಮತ್ತು ಪುನರುತ್ಥಾನ ಕಾರ್ಯಕ್ರಮವು ಗ್ರಾಮೀಣ ಆರ್ಥಿಕತೆಯನ್ನು ಮತ್ತಷ್ಟು ಉತ್ತೇಜಿಸಲು ಕೌಶಲ್ಯ ಅಭಿವೃದ್ಧಿ ಮತ್ತು ತಂತ್ರಜ್ಞಾನ ಅಳವಡಿಕೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ.

ಆದಾಯ ಮತ್ತು ವಿನಿಯೋಗ ಎರಡರಲ್ಲೂ ಏರಿಕೆ: ಗ್ರಾಮೀಣ ಕುಟುಂಬಗಳಲ್ಲಿ ಗಮನಾರ್ಹವಾದ ಬಹುಪಾಲು ಜನರು ಆದಾಯದಲ್ಲಿ ಏರಿಕೆ ಮತ್ತು ವಿನಿಯೋಗದಲ್ಲೂ ಏರಿಕೆಯನ್ನು ಮಾಡುತ್ತಿದ್ದಾರೆ, ಇದು ಆರ್ಥಿಕ ಯೋಗಕ್ಷೇಮವನ್ನು ಸೂಚಿಸುತ್ತದೆ. ಬೆಳೆಯುತ್ತಿರುವ ಕೃಷಿಯೇತರ ಆರ್ಥಿಕತೆ: ಗ್ರಾಮೀಣ ಆರ್ಥಿಕತೆಯು ಕೃಷಿಯೇತರ ಚಟುವಟಿಕೆಗಳಿಂದ ಹೆಚ್ಚಾಗಿ ನಡೆಸಲ್ಪಡುತ್ತಿದೆ, ಇದು ಈಗ ಗ್ರಾಮೀಣ ಆದಾಯದ ಮೂರನೇ ಎರಡರಷ್ಟು ಮತ್ತು ರಾಷ್ಟ್ರೀಯ ಉತ್ಪಾದನಾ ವಲಯದ ಗಣನೀಯ ಪಾಲನ್ನು ಹೊಂದಿದೆ. ಕೃಷಿಯೇತರ ವಲಯವು ಬೆಳೆಯುತ್ತಿರುವಾಗ, ಕಾರ್ಮಿಕರ ಉತ್ಪಾದಕತೆಯಲ್ಲಿನ ಅಸಮಾನತೆಯನ್ನು ಪರಿಹರಿಸುವ ಮತ್ತು ಉದ್ಯೋಗ ಲಾಭಗಳನ್ನು ಗಮನಾರ್ಹವಾಗಿ ಸುಧಾರಿಸುವ ಅವಶ್ಯಕತೆಯಿದೆ.

## ಬೌದ್ಧಿಕ ಸಿರಿ

ಆನೆಯ ಕಾಲಿಗೆ ಏಕೆ ಹಗ್ಗವನ್ನು ಕಟ್ಟುತ್ತಾರೆ?

ಕಾಡಾನೆಗಳನ್ನು ಸೆರೆಹಿಡಿಯಲು ಖೆಡ್ಡಾ ತೋಡಿ, ಅದರ ಮೇಲೆ ಸೊಪ್ಪು ಇತ್ಯಾದಿಗಳನ್ನು ಹಾಕಿ, ಮರೆಮಾಚುತ್ತಾರೆ. ಆಹಾರ ಅರಸುತ್ತ ಸಾಗುವ ಆನೆ ಖೆಡ್ಡಾಕ್ಕೆ ಬೀಳುತ್ತದೆ. ಹೀಗೆ ಬಿದ್ದ ಆನೆಯನ್ನು ಪಳಗಿದ ಆನೆಗಳ ಸಹಾಯದಿಂದ ಮೇಲೆತ್ತಿ ಬಳಿಕ ಅದರ ಕಾಲಿಗೆ ಕಬ್ಬಿಣದ ಗಟ್ಟಿಮುಟ್ಟಾದ ಸರಪಳಿಯನ್ನು ಕಟ್ಟಿ ಅದರ ಇನ್ನೊಂದು ತುದಿಯನ್ನು ದೊಡ್ಡದಾದ ಮರಕ್ಕೆ ಕಟ್ಟುತ್ತಾರೆ.

ಆನೆ ಖಂಡಿತವಾಗಿಯೂ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಕಾಲಿಗೆ ಕಟ್ಟಿದ ಸರಪಳಿ ಬಲಿಷ್ಠವಾಗಿರುವುದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಮೊದಮೊದಲು ಒಂದು ಗಂಟೆ, ಎರಡು ಗಂಟೆ, ಒಂದು ದಿನ, ಎರಡು ದಿನ ಹೀಗೆ ಆನೆ ಎಷ್ಟೇ ಪ್ರಯತ್ನಿಸಿದರೂ ಕಾಲಿಗೆ ಕಟ್ಟಿದ ಸರಪಳಿಯ ಬಂಧನದಿಂದಾಗಿ ತಪ್ಪಿಸಿಕೊಳ್ಳಲಾರದು.

ಈಗ ಆನೆಯ ಮನಸ್ಸಿನಲ್ಲಿ ಒಂದು ವಿಷಯ ದೃಢವಾಗಿ ಹೊಕ್ಕುತ್ತದೆ. "ನನ್ನ ಕಾಲಿಗೆ ಏನೋ ಕಟ್ಟಿದ್ದಾರೆ, ನಾನೆಷ್ಟೇ ಪ್ರಯತ್ನಿಸಿದರು ಈ ಬಂಧನದಿಂದ ಬಿಡಿಸಿಕೊಳ್ಳಲು ಆಗದು" ಎಂದು.

ಕ್ರಮೇಣ ಆನೆಯನ್ನು ಅಷ್ಟೊಂದು ಬಲಿಷ್ಠವಲ್ಲದ ಸರಪಳಿ, ಕೊನೆ ಕೊನೆಗೆ ಕೇವಲ ಒಂದು ತುಂಡು ಹಗ್ಗವನ್ನು ಕಟ್ಟಿ, ಅದರ ಇನ್ನೊಂದು ತುದಿಯನ್ನು ಹಾಗೆಯೇ ಬಿಟ್ಟರೂ ಸಹ ಆನೆಯ ಮನಸ್ಸಿನಲ್ಲಿ "ನನ್ನ ಕಾಲಿಗೆ ಕಟ್ಟಿದ್ದಾರೆ ಹಾಗಾಗಿ ನಾನು ಬಂಧಿಸಸಲ್ಪಟ್ಟಿದ್ದೇನೆ" ಎನ್ನುವ ಚಿಂತನೆಯೇ ಇರುತ್ತದೆ.

ನಾವು ಹೀಗೆಯೇ, ನಾವು ಹುಟ್ಟಿ ಬೆಳೆದ ಪರಿಸರ, ಮನೆಯ ಪರಿಸ್ಥಿತಿ, ನಮಗೆ ಜೀವನದಲ್ಲಿ ಸಿಗುವ ಒಡನಾಡಿ ಮಿತ್ರರು ಮತ್ತು ಇವರೆಲ್ಲರ ಪ್ರಭಾವ ನಮ್ಮನ್ನು ಒಂದು ಚಿಂತನೆಗೆ ಮಿತಿಗೊಳಿಸುತ್ತದೆ ಮತ್ತು ಆ ಚಿಂತನೆಗಳಿಂದ ಹೊರಬರಲು ಸುಲಭವಾಗಿ ಸಾಧ್ಯವಾಗುವುದಿಲ್ಲ ಎಂದು ನಂಬುತ್ತೇವೆ.

ಒಮ್ಮೊಮ್ಮೆ ಆನೆಗಳು ಮದವೇರಿ ದಾಂಧಲೆ ಮಾಡುವುದನ್ನು ನೋಡಿದ್ದೇವೆ. ಇಲ್ಲಿ ಆನೆ ತನ್ನೆಲ್ಲ ಬಂಧನಗಳಿಂದ ಹೊರಬಂದು ತನ್ನ ನೈಜ ಶಕ್ತಿಯನ್ನು ಪ್ರದರ್ಶಿಸುತ್ತದೆ !.

ಹಾಗೆಯೇ , ನಾವು ನಮ್ಮ ಚಿಂತನೆಯ ಮಿತಿಗಳಿಂದ ಹೊರಬಂದು ನಮ್ಮ ನೈಜ್ಯ ಸಾಮರ್ಥ್ಯವನ್ನು ತೋರಲು ಯಾವತ್ತೂ ಸಾಧ್ಯವಿದೆ. ಅಲ್ಲವೇ ?

## ಸೆಪ್ಟೆಂಬರ್ 30 ರ ಸಭೆಯ ಝಲಕ್












## ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



PHF ಪಾಂಡುರಂಗ ಲಾಗ್ವಂಕರ್
07 OCT



Rtn. ಕೊರಗಪ್ಪ ಶೆಟ್ಟಿಗಾರ್
13 OCT





## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 13ನೇ ವಾರದ ಸಭೆಯು ತಾರೀಕು 30/9/2025, ಮಂಗಳವಾರದಂದು RCC ಕಾರ್ಯಾಲಯದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ಅಧ್ಯಕ್ಷರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವರದಿವಾಚನ ಮಾಡಿದರು. ಅಧ್ಯಕ್ಷರು ವಲಯ ಸಾಂಸ್ಕೃತಿಕ ಸ್ಪರ್ಧೆ ಬಗ್ಗೆ ವಿವರ ನೀಡಿದರು.

ರೊ. ಪ್ರಭಾಕರ್ ಶೆಟ್ಟಿ ಅವರು ಮಾತನಾಡಿ ಮುಂಬರುವ ತಿಂಗಳುಗಳಲ್ಲಿ ನಡೆಯಬೇಕಿರುವ ಕಾರ್ಯಕ್ರಮಗಳ ಸೂಚನೆ ನೀಡಿ ಪೂರ್ವತಯಾರಿ ನಡೆಸುವಂತೆ ಕೇಳಿಕೊಂಡರು.

ರೊ. ಗುರುಪ್ರಸಾದ್ ಕಾಮತ್ ಅವರು ಮಾತನಾಡಿ ಸಾಂಸ್ಕೃತಿಕ ಸ್ಪರ್ಧೆಗೆ ಬೇಕಾಗುವ ಪೂರ್ವತಯಾರಿ ಬಗ್ಗೆ ತಿಳಿಸಿದರು. ರೊ. ಸುಕೇಶ್ ಕುಂದರ್ ಅವರು ತಿಂಗಳ ಕಾರ್ಯಕ್ರಮ, ಸಾಂಸ್ಕೃತಿಕ ಸ್ಪರ್ಧೆ ಹಾಗೂ ಹೊರಂಗಣ ಸಭೆ ಇವೆಲ್ಲದರ ಜವಾಬ್ದಾರಿಯನ್ನು ಸೂಕ್ತ ಸದಸ್ಯರಿಗೆ ವಹಿಸಲು ಸೂಚಿಸಿದರು.

ವಾರದ ಬುಲೆಟಿನ್ ಐಶ್ವರ್ಯ ವನ್ನು ಬಿಡುಗಡೆಯನ್ನು ಸುಕೇಶ್ ಕುಂದರ್ ನಡೆಸಿದರು. ಇದಕ್ಕೆ ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ರೊ. ರಾಜೇಶ್ ಡಿ ಶೆಣೈ ಅವರು ವಾರದ ಬುಲೆಟಿನ್ ನ ಉದ್ದೇಶವನ್ನು ವಿವರಿಸಿದರು. ಸತತ ಎರಡು ವಾರಗಳಿಂದ ಲೇಖನಗಳನ್ನು ನೀಡುತ್ತಿರುವ ರೊ. ಸುಕೇಶ್ ಕುಂದರ್ ಅವರಿಗೆ ಕೃತಜ್ಞತೆ ಸಲ್ಲಿಸಿ ಇತರ ಸದಸ್ಯರೂ ಇದೇ ರೀತಿ ಸಹಕರಿಸಬೇಕಾಗಿ ಕೋರಿದರು.

ನಿಕಟ ಪೂರ್ವ ಅಧ್ಯಕ್ಷ ಸುನಿಲ್ ಅವರು ರೋಟರಿಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯಿಂದ ತೊಡಗಿಕೊಳ್ಳುವಂತೆ ಅಧ್ಯಕ್ಷರಿಗೆ ಸಲಹೆ ನೀಡಿದರು. ಕಾರ್ಯದರ್ಶಿಯವರು ಕಳೆದ ವಾರ ಹುಟ್ಟು ಹಬ್ಬ ಆಚರಿಸಿದ ಸದಸ್ಯರಿಗೆ ಶುಭಕೋರಿದರು.

ರೊ. ರಾಜೇಶ್ ಡಿ ಶೆಣೈ ಅವರನ್ನು ಉತ್ತಮ ಸಂಚಿಕೆಗಳ ತಯಾರಿಗಾಗಿ ಗುರುತಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಮುಂದಿನ ದಿನಗಳಲ್ಲಿ ಸೂಕ್ತ ಮಾಹಿತಿ ನೀಡುವುದಾಗಿ ತಿಳಿಸಿದರು.

ಅಕ್ಟೋಬರ್ ತಿಂಗಳಲ್ಲಿ ಆರ್ಥಿಕ ಸದೃಢತೆ ಬಗ್ಗೆ ಮಾಹಿತಿ ಕಾರ್ಯಕ್ರಮ ನಡೆಸುವುದಾಗಿ ತಿಳಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಅದೃಷ್ಟಶಾಲಿ ರೋಟರಿಯನ್ ಆಯ್ಕೆ ಮಾಡಿದರು. ರೊ. ಸ್ಮಿತಾ ಕಾಮತ್ ಅದೃಷ್ಟಶಾಲಿಯಾಗಿ ಆಯ್ಕೆಗೊಂಡರು.

ಕಾರ್ಯದರ್ಶಿ ವಂದನಾರ್ಪಣೆಗೈದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 12ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿಮೂರನೆಯ** ಆವೃತ್ತಿಯನ್ನು ಯುವಸೇವಾ ನಿರ್ದೇಶಕ Rtn. ಸುಕೇಶ್ ಕುಂದರ್ ರವರು 30/9/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ **ಹದಿಮೂರ**ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ಕಾರ್ಯದರ್ಶಿ ರೊ. ಕೃಷ್ಣಪ್ಪ ನಡೆಸಿದರು ಮತ್ತು ರೊ. ಸ್ಮಿತಾ ಕಾಮತ್ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ವಿಶ್ವವಿಖ್ಯಾತ ಮೈಸೂರು ದಸರಾದ ಜಂಬೂ ಸವರಿ ಸಾಂಸ್ಕೃತಿಕ ಮೆರವಣಿಗೆಯಲ್ಲಿ ಭಾಗವಹಿಸಿದ ನಮ್ಮ ನಿಯೋಜಿತ ಅಧ್ಯಕ್ಷ Rtn ಸಂದೀಪ ಕುಮಾರ್ ಪಾಲ್ಗೊಳ್ಳುವಿಕೆಯ ಇಷ್ಟ ಮಹಾಲಿಂಗೇಶ್ವರ ಹುಲಿವೇಷ ತಂಡ **ಪ್ರಥಮ ಬಹುಮಾನ** ಪಡೆಯಿತು. ಒಟ್ಟು 118 ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.